ಸಂಖ್ಯೆ: ಬಿ9/ವಅಅ/ವಿವ–5/2016–17

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ) ಇವರ ಕಚೇರಿ,
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು–3, ದಿನಾಂಕ: 8 –01–2019

**ಅಧಿಕೃತ ಜ್ಞಾಪನಾ ಪತ್ರ**

**ವಿಷಯ:** 18 ತಿಂಗಳ ವೃತ್ತಿ ತರಬೇತಿ ಪೂರ್ಣಗೊಳಿಸಿ ಹಿಂದಿರುಗುವ ವಲಯ ಅರಣ್ಯಾಧಿಕಾರಿಗಳಿಗೆ 6 ತಿಂಗಳ ಕ್ಷೇತ್ರ ಮಟ್ಟದ ವೃತ್ತಿ ತರಬೇತಿ ನೀಡುವ ಕುರಿತು ಹಾಗೂ ಸದರಿ ವಲಯ ಅರಣ್ಯಾಧಿಕಾರಿಗಳಿಗೆ ಸ್ಥಳ ನಿಯುಕ್ತಿಗೊಳಿಸುವ ಕುರಿತು

**ಉಲ್ಲೇಖ:**
1. ವೃಂದ ಮತ್ತು ನೇಮಕಾತಿ ನಿಯಮದ ಅಧಿಸೂಚನೆ ಸಂಖ್ಯೆ: ಅಪಜೀ 366 ಅಪಸೇ 2010 ದಿನಾಂಕ: 25.05.2012
2. ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಸಂಖ್ಯೆ: ಬಿ9–ವಅಅ–ವಿವ–5/2015–16 ದಿನಾಂಕ 22.03.2016
3. ಈ ಕಛೇರಿಯ ಅಂತಿಮ ಆಯ್ಕೆ ಪಟ್ಟಿ ದಿನಾಂಕ: 22.03.2017
4. ಈ ಕಛೇರಿಯ ಆದೇಶ ಸಂಖ್ಯೆ: 55/2017–18 ದಿನಾಂಕ: 30.06.2017
5. ಈ ಕಛೇರಿಯ ಆದೇಶ ಸಂಖ್ಯೆ: 75/2017–18 ದಿನಾಂಕ: 18.07.2017
6. Director, Uttarakhand Forestry Training Academy, Haldwani (Uttarakhand) ಇವರ ಕಛೇರಿ ಪತ್ರ ಸಂಖ್ಯೆ: 981/1–3–6 ದಿನಾಂಕ: 07.12.2018
7. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾನವ ಸಂಪನ್ಮೂಲ ಅಭಿವೃದ್ಧಿ), ಧಾರವಾಡ ಇವರ ಕಛೇರಿ ಪತ್ರ ಸಂಖ್ಯೆ: ಎ5/ತರಬೇತಿ/RFO Academy/ಸಿಆರ್–20/2017–18 ದಿನಾಂಕ: 29.12.2018

* * * * * *

**ಪ್ರಸ್ತಾವನೆ:**

ಉಲ್ಲೇಖ (4) ಮತ್ತು (5) ರ ಈ ಕಛೇರಿಯ ನೇಮಕಾತಿ ಆದೇಶದಲ್ಲಿ ವಲಯ ಅರಣ್ಯಾಧಿಕಾರಿ ಹುದ್ದೆಗೆ ಆಯ್ಕೆಗೊಂಡಿರುವ ಅಭ್ಯರ್ಥಿಗಳ ಪೈಕಿ 12 ವಲಯ ಅರಣ್ಯಾಧಿಕಾರಿಗಳನ್ನು Uttarakhand Forestry Training Academy, Haldwani (Uttarakhand) ಹಾಗೂ 25 ವಲಯ ಅರಣ್ಯಾಧಿಕಾರಿಗಳನ್ನು Karnataka Forest Academy, Gungaragatti, Dharwad ತರಬೇತಿ ಕೇಂದ್ರದಲ್ಲಿ ನಡೆಯುವ 18 ತಿಂಗಳ ವೃತ್ತಿ ತರಬೇತಿಗಾಗಿ ನಿಯೋಜಿಸಲಾಗಿರುತ್ತದೆ. ವೃತ್ತಿ ತರಬೇತಿಗೆ ನಿಯೋಜನೆಗೊಂಡಿರುವ ವಲಯ ಅರಣ್ಯಾಧಿಕಾರಿಗಳು ಕ್ರಮವಾಗಿ ದಿನಾಂಕ: 09.01.2019 ಹಾಗೂ ದಿನಾಂಕ: 23.01.2019 ಕ್ಕೆ 18 ತಿಂಗಳ ವೃತ್ತಿ ತರಬೇತಿಯನ್ನು ಪೂರ್ಣಗೊಳಿಸಿ ಮಾತೃ ಇಲಾಖೆಗೆ ಹಿಂದಿರುಗುತ್ತಾರೆ. ಉಲ್ಲೇಖ (1) ಹಾಗೂ (2) ರ ಅಧಿಸೂಚನೆಗಳ ಪ್ರಕಾರ 18 ತಿಂಗಳ ವೃತ್ತಿ ತರಬೇತಿ ಪೂರ್ಣಗೊಂಡ ನಂತರ 6 ತಿಂಗಳುಗಳ ಕಾಲ ಕ್ಷೇತ್ರ ಮಟ್ಟದ ವೃತ್ತಿ ತರಬೇತಿ ಈ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳಿಗೆ ನೀಡಬೇಕಾಗಿರುತ್ತದೆ.

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾನವ ಸಂಪನ್ಮೂಲ ಅಭಿವೃದ್ಧಿ), ಧಾರವಾಡ ಇವರು ವೃತ್ತಿ ತರಬೇತಿಯಲ್ಲಿರುವ ಈ ಎಲ್ಲಾ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳಿಗೆ ವೇತನ ಭತ್ಯೆಗಳನ್ನು ಪಾವತಿಸುತ್ತಿದ್ದಾರೆ ಹಾಗೂ ಈ ಅಧಿಕಾರಿಗಳು ಮುಂದಿನ 6 ತಿಂಗಳ ಅವಧಿಯಲ್ಲಿ ವಿವಿಧ ಘಟಕಗಳಲ್ಲಿ ಕ್ಷೇತ್ರ ಮಟ್ಟದ ವೃತ್ತಿ ತರಬೇತಿ ನಿಮಿತ್ತ ಕಾರ್ಯ ನಿರ್ವಹಿಸಬೇಕಾಗಿರುತ್ತದೆ. ಈ ಅವಧಿಯಲ್ಲಿಯೂ ಸಹ ತರಬೇತಿ ಸಂಸ್ಥೆಯಿಂದಲೇ ವೇತನ ಭತ್ಯೆಗಳನ್ನು ಪಾವತಿಸಲಾಗುವುದು. ವೃತ್ತಿ ತರಬೇತಿ ಕುರಿತಂತೆ ವೇಳಾ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ ಹಾಗೂ ಈ ಅವಧಿಯಲ್ಲಿ ಕಾರ್ಯ ನಿರ್ವಹಿಸಬೇಕಾದ ಕಾರ್ಯಗಳ ಬಗ್ಗೆ ವಿವರವಾದ ಪಟ್ಟಿಯನ್ನು ಸಹ ಸಿದ್ಧಪಡಿಸಲಾಗಿದೆ.

ಸದರಿ ಪರಿಕ್ಷಾರ್ಥ ವಲಯ ಅರಣ್ಯಾಧಿಕಾರಿಗಳಿಗೆ 6 ತಿಂಗಳ ಕ್ಷೇತ್ರ ಮಟ್ಟದ ವೃತ್ತಿ ತರಬೇತಿ ಮತ್ತು ನಂತರ ಮುಂದಿನ ಕರ್ತವ್ಯದ ನಿರ್ವಹಣೆಗಾಗಿ ಸ್ಥಳ ಹಂಚಿಕೆ ನೀಡಬೇಕಾಗಿರುತ್ತದೆ. ಈ ಸಂಬಂಧ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಆದೇಶ**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ – 1 ಮತ್ತು 2 ರಲ್ಲಿ ಸ್ಥಳ ನಿಯುಕ್ತಿ ಆದೇಶವನ್ನು ಹೊರಡಿಸಲಾಗಿದೆ. ಅನುಬಂಧ – 3 ಮತ್ತು 4 ರಲ್ಲಿ ಕ್ಷೇತ್ರ ಮಟ್ಟದ ವೃತ್ತಿ ತರಬೇತಿ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ.

ಸದರಿ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಆದೇಶಿಸಿದೆ ಹಾಗೂ 6 ತಿಂಗಳುಗಳ ಕ್ಷೇತ್ರ ಮಟ್ಟದ ವೃತ್ತಿ ತರಬೇತಿ ವೇಳೆ ಸದರಿ ವಲಯ ಅರಣ್ಯಾಧಿಕಾರಿಗಳು ಯಾವ ಯಾವ ಘಟಕಗಳಲ್ಲಿ ಕರ್ತವ್ಯ ನಿರ್ವಹಿಸಬೇಕೆಂಬ ಕುರಿತಂತೆ ಆದೇಶವನ್ನು (ಈ ಕಛೇರಿಯ ಅನುಬಂಧ – 1 ರ ವೇಳಾ ಪಟ್ಟಿಯಂತೆ) ಸಂಬಂಧಿಸಿದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು / ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.

1. 18 ತಿಂಗಳ ವೃತ್ತಿ ತರಬೇತಿ ಪೂರ್ಣಗೊಂಡ ನಂತರ Uttarakhand Forestry Training Academy, Haldwani (Uttarakhand) ತರಬೇತಿ ಕೇಂದ್ರದಿಂದ ಹಿಂದಿರುಗುವ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳು ದಿನಾಂಕ: 16.01.2019 ರಂದು ಹಾಗೂ Karnataka Forest Academy, Gungaragatti, Dharwad ತರಬೇತಿ ಕೇಂದ್ರದಿಂದ ಹಿಂದಿರುಗುವ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳು ದಿನಾಂಕ: 24.01.2019 ರಂದು ಈ ಕೆಳಸಹಿದಾರರ ಮುಂದೆ ಹಾಜರಾಗಲು ಸೂಚಿಸಿದೆ.

2. ವೃತ್ತಿ ತರಬೇತಿಯನ್ನು ಸಮರ್ಪಕವಾಗಿ ಪೂರ್ಣಗೊಳಿಸಿದ ಕುರಿತಂತೆ ಸಂಬಂಧಿಸಿದ ತರಬೇತಿ ಕೇಂದ್ರದ ಮುಖ್ಯಸ್ಥರಿಂದ ಪ್ರಮಾಣ ಪತ್ರ ಸ್ವೀಕರಿಸಿ, ಈ ಕಛೇರಿಗೆ ಹಾಜರುಪಡಿಸಿ, ಈ ಕಛೇರಿಯಿಂದ ಸದರಿ ಆದೇಶವನ್ನು ಪಡೆದು ಸ್ಥಳ ನಿಯುಕ್ತಿಗೊಂಡ ಕಛೇರಿಗೆ ಹಾಜರಾಗುವ ಮುನ್ನ ಸಂಬಂಧಿಸಿದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ / ಅರಣ್ಯ ಸಂರಕ್ಷಣಾಧಿಕಾರಿ / ಉಪ ಅರಣ್ಯ ಸಂರಕ್ಷಣಾಧಿಕಾರಿಯವರನ್ನು ಖುದ್ದಾಗಿ ಭೇಟಿಯಾಗಿ ಸದರಿ ಅಧಿಕಾರಿಗಳಿಂದ ಸೂಕ್ತ ನಿರ್ದೇಶನ ಪಡೆದು ನಿಯುಕ್ತಿಗೊಂಡಿರುವ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗಲು ತಿಳಿಸಿದೆ.

3. ಪರಿಕ್ಷಾರ್ಥ ವಲಯ ಅರಣ್ಯಾಧಿಕಾರಿಗಳು ಸ್ಥಳ ನಿಯುಕ್ತಿಗೊಳಿಸಿರುವ ವಲಯಗಳಲ್ಲಿ ಕರ್ತವ್ಯವನ್ನು ನಿರ್ವಹಿಸುವುದು.

4. ವಲಯದ ಪೂರ್ಣ ಉಸ್ತುವಾರಿ, ಜವಾಬ್ದಾರಿ ಇತ್ಯಾದಿಗಳು ಪ್ರಸ್ತುತ ಸದರಿ ವಲಯದ ಹೆಚ್ಚುವರಿ ಪ್ರಭಾರವನ್ನು ಯಾರು ವಹಿಸಿರುತ್ತಾರೆಯೋ ಅವರೇ ಮುಂದಿನ 6 ತಿಂಗಳುಗಳ ವರೆಗೆ ಅಂದರೆ, ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳು 6 ತಿಂಗಳ ಕ್ಷೇತ್ರ ಮಟ್ಟದ ವೃತ್ತಿ ತರಬೇತಿ ಪೂರ್ಣಗೊಳಿಸುವವರೆಗೆ ಮುಂದುವರೆಸತಕ್ಕದ್ದು. ನಂತರ ವಲಯದ ಪೂರ್ಣ ಪ್ರಭಾರವನ್ನು ವೃತ್ತಿ ತರಬೇತಿ ಪೂರ್ಣಗೊಳಿಸಿದ ವಲಯ ಅರಣ್ಯಾಧಿಕಾರಿಗಳಿಗೆ ಹಸ್ತಾಂತರಿಸತಕ್ಕದ್ದು.

5. 6 ತಿಂಗಳ ಕ್ಷೇತ್ರ ಮಟ್ಟದ ವೃತ್ತಿ ತರಬೇತಿ ಪೂರ್ಣಗೊಂಡ ನಂತರ ಸದರಿ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳು ಅನುಬಂಧ – 1 ಮತ್ತು 2 ರಲ್ಲಿ ಸ್ಥಳ ನಿಯುಕ್ತಿಗೊಂಡಿರುವ ವಲಯದ ಪೂರ್ಣ ಉಸ್ತುವಾರಿಯನ್ನು ವಹಿಸಿ, ಸ್ವತಂತ್ರ ಪ್ರಭಾರದ ಮೇರೆಗೆ ಕರ್ತವ್ಯ ನಿರ್ವಹಿಸುವುದು.

6. ಕ್ಷೇತ್ರ ಮಟ್ಟದ ವೃತ್ತಿ ತರಬೇತಿಯಲ್ಲಿರುವ ಈ ಎಲ್ಲಾ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳ ವೇತನ ಭತ್ಯೆ ಇತ್ಯಾದಿಗಳನ್ನು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾನವ ಸಂಪನ್ಮೂಲ ಅಭಿವೃದ್ಧಿ), ಧಾರವಾಡ ಇಲ್ಲಿಯೇ ಮುಂದಿನ 6 ತಿಂಗಳ ವರೆಗೆ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

7. ಕ್ಷೇತ್ರ ಮಟ್ಟದ ವೃತ್ತಿ ತರಬೇತಿ ವೇಳೆ ಕಾರ್ಯ ನಿರ್ವಹಿಸುತ್ತಿರುವ ಘಟಕಗಳಿಂದ ಹಾಜರಾತಿ ಪ್ರಮಾಣ ಪತ್ರವನ್ನು ಸೂಕ್ತ ಸಮಯದಲ್ಲಿ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾನವ ಸಂಪನ್ಮೂಲ ಅಭಿವೃದ್ಧಿ), ಧಾರವಾಡ ಇವರಿಗೆ ಸಲ್ಲಿಸಿ ವೇತನ ಭತ್ಯೆಗಳನ್ನು ಪಡೆಯಬಹುದಾಗಿರುತ್ತದೆ.

8. ಕ್ಷೇತ್ರ ಮಟ್ಟದ ವೃತ್ತಿ ತರಬೇತಿಯ ಕುರಿತಂತೆ ಸಂಬಂಧಿಸಿದ ವೃತ್ತಗಳ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಅನುಬಂಧ – 3 ಮತ್ತು 4 ರಲ್ಲಿ ತಿಳಿಸಿರುವ ವೇಳಾ ಪಟ್ಟಿಯಂತೆ ಸದರಿ ವಲಯ ಅರಣ್ಯಾಧಿಕಾರಿಗಳಿಗೆ ಸೂಕ್ತ ವ್ಯವಸ್ಥೆ ಕಲ್ಪಿಸುವುದು ಹಾಗೂ ಯಾವ ಯಾವ ಸಮಯದಲ್ಲಿ ಯಾವ ಯಾವ ವಲಯ ಹಾಗೂ ಘಟಕಗಳ ಅಡಿಯಲ್ಲಿ ಕ್ಷೇತ್ರ ಮಟ್ಟದ ವೃತ್ತಿ ತರಬೇತಿಗಾಗಿ ನಿಯೋಜಿಸುವ ಕುರಿತು ಎಲ್ಲಾ ವ್ಯವಸ್ಥೆ ಹಾಗೂ ಮಾರ್ಗದರ್ಶನವನ್ನು ಸಂಬಂಧಿಸಿದ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳೇ ನಿರ್ವಹಿಸುವುದು.

9. 18 ತಿಂಗಳ ವೃತ್ತಿ ತರಬೇತಿಯನ್ನು ಪೂರೈಸಿ ಪ್ರಸ್ತುತ ಇಲಾಖೆಗೆ ಹಿಂದಿರುಗಿರುವ ವಲಯ ಅರಣ್ಯಾಧಿಕಾರಿಗಳಿಗೆ ಪ್ರಸ್ತುತ ಸ್ಥಳ ನಿಯುಕ್ತಿ ಆದೇಶವನ್ನು ಹೊರಡಿಸಲಾಗಿರುತ್ತದೆ. ಆದಾಗ್ಯೂ, 6 ತಿಂಗಳ ಕ್ಷೇತ್ರ ಮಟ್ಟದ ವೃತ್ತಿ ತರಬೇತಿ ಪೂರ್ಣಗೊಳ್ಳುವ ವರೆಗೆ ಸ್ಥಳ ನಿಯುಕ್ತಿಗೊಂಡಿರುವ ವಲಯಕ್ಕೆ ಸಂಬಂಧಿಸಿದ ಆಗುಹೋಗುಗಳು / ಜವಾಬ್ದಾರಿ / ರಕ್ಷಣಾ ಕಾರ್ಯ / ಅಭಿವೃದ್ಧಿ / ಅನುದಾನ ಇತ್ಯಾದಿಗಳ ಮೇಲೆ ಯಾವುದೇ ಜವಾಬ್ದಾರಿಯನ್ನು ಹೊಸದಾಗಿ ನೇಮಕಗೊಂಡ ವಲಯ ಅರಣ್ಯಾಧಿಕಾರಿಗಳ ಮೇಲೆ ಇರುವುದಿಲ್ಲ. 6 ತಿಂಗಳ ಕ್ಷೇತ್ರ ಮಟ್ಟದ ವೃತ್ತಿ ತರಬೇತಿ ಪೂರ್ಣಗೊಂಡ ನಂತರ ಸದರಿ ವಲಯದ ಪೂರ್ಣ ಜವಾಬ್ದಾರಿಯು ಪ್ರಸ್ತುತ ಸ್ಥಳ ನಿಯುಕ್ತಿಗೊಂಡಿರುವ ವಲಯ ಅರಣ್ಯಾಧಿಕಾರಿಗಳು ನಿರ್ವಹಿಸುವುದು.

10. ಪ್ರಸ್ತುತ ಸದರಿ ವಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಲಯ ಅರಣ್ಯಾಧಿಕಾರಿಗಳು / ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹೊಸದಾಗಿ ಸ್ಥಳ ನಿಯುಕ್ತಿಗೊಂಡಿರುವ ಪರಿಕ್ಷಾರ್ಥ ವಲಯ ಅರಣ್ಯಾಧಿಕಾರಿಗಳಿಗೆ ಮನೋಸ್ಥೈರ್ಯ / ಆಡಳಿತಾತ್ಮಕ ಕಾರ್ಯಗಳ ನಿರ್ವಹಣೆ / ರಕ್ಷಣಾ ಕಾರ್ಯದಲ್ಲಿ ಇವರನ್ನು ಹೆಚ್ಚಿನ ಮಟ್ಟದಲ್ಲಿ ತೊಡಗಿಸಿಕೊಳ್ಳಲು ತಿಳಿಸಿದೆ ಹಾಗೂ ಇವರಿಗೆ ತಂಗುವ ವ್ಯವಸ್ಥೆ ಮತ್ತು ಕಛೇರಿಯಲ್ಲಿ ಕಾರ್ಯ ನಿರ್ವಹಿಸಲು ಸೂಕ್ತ ಜಾಗದ ವ್ಯವಸ್ಥೆ ಮಾಡಿಕೊಳ್ಳಲು ತಿಳಿಸಿದೆ ಹಾಗೂ ಅವಶ್ಯಕತೆಗೆ ತಕ್ಕಂತೆ ವಾಹನದ ವ್ಯವಸ್ಥೆಯನ್ನು ಮಾಡಿಕೊಳ್ಳಲು ತಿಳಿಸಿದೆ.

11. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ತಮ್ಮ ವೃತ್ತ ವ್ಯಾಪ್ತಿಯಲ್ಲಿ ಕೆಲವು ಕ್ಷೇತ್ರ ಮಟ್ಟದ ವೃತ್ತಿ ತರಬೇತಿ ವಿಷಯಗಳ ನಿರ್ವಹಣೆಗೆ ಅವಕಾಶವಿಲ್ಲದೆ ಇದ್ದಲ್ಲಿ ಈ ಬಗ್ಗೆ ಇನ್ನಿತರೆ ವೃತ್ತಗಳಲ್ಲಿ ಈ ಕುರಿತಂತೆ ಅವಕಾಶವನ್ನು ನೀಡುವಂತೆ ಕೋರಿ ಪತ್ರ ವ್ಯವಹಾರ ನಡೆಸಿ, ಅನುಬಂಧ – 3 ಮತ್ತು 4 ರಲ್ಲಿ ನಿಗಧಿಪಡಿಸಿರುವ ಎಲ್ಲಾ ವಿಷಯಗಳ ಕುರಿತಂತೆ ಕ್ಷೇತ್ರ ಮಟ್ಟದ ತರಬೇತಿಯನ್ನು ಪರಿಕ್ಷಾರ್ಥ ವಲಯ ಅರಣ್ಯಾಧಿಕಾರಿಗಳಿಗೆ ನೀಡುವುದು.

12. ಯಾವುದಾದರೂ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳು ಕ್ಷೇತ್ರ ಮಟ್ಟದ ವೃತ್ತಿ ತರಬೇತಿ ಕುರಿತಂತೆ ನಿರ್ಲಕ್ಷ್ಯ ವಹಿಸಿದರೆ ನಿಯಮಾನುಸಾರ ಸೂಕ್ತ ಕ್ರಮ ತಕ್ಷಣ ತೆಗೆದುಕೊಳ್ಳುವುದು ಹಾಗೂ ಈ ಬಗ್ಗೆ ಈ ಕಛೇರಿಗೆ ವರದಿ ಸಲ್ಲಿಸುವುದು.

13. ಪ್ರಾದೇಶಿಕ ವಲಯ / ವನ್ಯಜೀವಿ ವಲಯಗಳಲ್ಲಿ ಕ್ಷೇತ್ರ ಮಟ್ಟದ ವೃತ್ತಿ ತರಬೇತಿ ನೀಡುವ ವೇಳೆ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳಿಗೆ ಪೂರ್ಣ ಮಾರ್ಗದರ್ಶನವನ್ನು ಸಂಬಂಧಿಸಿದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು / ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹೆಚ್ಚಿನ ಮುತುವರ್ಜಿ ವಹಿಸಿ ನೀಡುವುದು.

14. ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳು ಪ್ರಸ್ತುತ ಸ್ಥಳ ನಿಯುಕ್ತಿಗೊಂಡಿರುವ ವಲಯ / ಘಟಕಗಳಲ್ಲಿ ನಿಗಧಿತ ದಿನಾಂಕದಂದು ಕರ್ತವ್ಯಕ್ಕೆ ಹಾಜರಾಗುವುದು ಹಾಗೂ ಯಾವುದೇ ಸನ್ನಿವೇಶದಲ್ಲಿ ಯಾವುದೇ ಕಾರಣದಿಂದ ಸ್ಥಳ ನಿಯುಕ್ತಿ ಬದಲಾವಣೆಗೆ ಅವಕಾಶವಿರುವುದಿಲ್ಲ. ಸದರಿ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳು ಸ್ಥಳ ನಿಯುಕ್ತಿಗೊಂಡಿರುವ ಸ್ಥಳದ / ಘಟಕದ ಬದಲಾವಣೆಗಾಗಿ ಕೋರಿದಲ್ಲಿ ಅಥವಾ ಬಾಹ್ಯ ಒತ್ತಡ ತಂದಲ್ಲಿ ಇಂತಹ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)

ಪ್ರತಿಯನ್ನು

1. ಗೌರವಗಳೊಂದಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಅರಣ್ಯ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಈ ಮಾಹಿತಿಯನ್ನು ಮಾನ್ಯ ಅರಣ್ಯ ಸಚಿವರ ಗಮನಕ್ಕೆ ತರಲು ಕೋರಲಾಗಿದೆ.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ), ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಸಂಬಂಧಿಸಿದ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ
5. ಸಂಬಂಧಿಸಿದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ
6. ಸಂಬಂಧಿಸಿದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ
7. ಸಂಬಂಧಿಸಿದ ಎಲ್ಲಾ ಪರೀಕ್ಷಾರ್ಥ ವಲಯ ಅರಣ್ಯಾಧಿಕಾರಿಗಳಿಗೆ
8. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಐ.ಸಿ.ಟಿ.), ಬೆಂಗಳೂರು ಇವರಿಗೆ ಕಳುಹಿಸುತ್ತಾ, ಈ ಆದೇಶ ಹಾಗೂ ಲಗತ್ತುಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.
9. ಈ ಕಛೇರಿಯ ಬಿ1 ಶಾಖೆಗೆ

## ಅನುಬಂಧ – 1

ತರಬೇತಿ ಕೇಂದ್ರ:Uttarakhand Forestry Training Academy, Haldwani (Uttarakhand)

| ಕ್ರ.ಸಂ. | ಹೆಸರು | ಸ್ವಂತ ಜಿಲ್ಲೆ | ವೃತ್ತ | ಸ್ಥಳ ನಿಯುಕ್ತಿಗೊಳಿಸಿರುವ ವಲಯ |
|---|---|---|---|---|
| 1 | ಶ್ರೀ ಚಂದನ್ ಆರ್. | ಮೈಸೂರು | ಹಾಸನ | ಸಾಮಾಜಿಕ ಅರಣ್ಯ ವಲಯ ಹೊಳೆನರಸೀಪುರ |
| 2 | ಶ್ರೀ ಅನಿತ್ ರಾಜ್ ಹೆಚ್. ಬಿ. | ಕೊಡಗು | ಮೈಸೂರು | ಸಾಮಾಜಿಕ ಅರಣ್ಯ ವಲಯ ಮೈಸೂರು |
| 3 | ಕುಮಾರಿ ಮೆಘನ ಜಿ. ಕೆ. | ತುಮಕೂರು | ಬಳ್ಳಾರಿ | ಸಾಮಾಜಿಕ ಅರಣ್ಯ ವಲಯ ಹೊಸದುರ್ಗ |
| 4 | ಶ್ರೀ ಸಿದ್ದರಾಜು ಎಸ್. ಎಸ್. | ಮೈಸೂರು | ಕರ್ನಾಟಕ ರಾಜ್ಯ ಅರಣ್ಯ ಅಕಾಡೆಮಿ, ಧಾರವಾಡ | ಅರಣ್ಯ ತರಬೇತಿ ಕೇಂದ್ರ ತಟ್ಟಿಹಳ್ಳ, ಉತ್ತರ ಕನ್ನಡ |
| 5 | ಶ್ರೀ ಕೌಶಿಕ್ ದಳವಾಯಿ | ಬಳ್ಳಾರಿ | ಚಾಮರಾಜನಗರ | ಸಾಮಾಜಿಕ ಅರಣ್ಯ ವಲಯ ಯಳಂದೂರು |
| 6 | ಶ್ರೀ ರಾಜೀವ್ ಬಿರಾದಾರ್ | ವಿಜಯಪುರ | ಧಾರವಾಡ | ಸಾಮಾಜಿಕ ಅರಣ್ಯ ವಲಯ ಹಿರೇಕೆರೂರು |
| 7 | ಕುಮಾರಿ ಪೂಜಶ್ರೀ ಡಿ. ವಿ. | ಕೊಡಗು | ಕರ್ನಾಟಕ ರಾಜ್ಯ ಅರಣ್ಯ ಅಕಾಡೆಮಿ, ಧಾರವಾಡ | ಕರ್ನಾಟಕ ರಾಜ್ಯ ಅರಣ್ಯ ಅಕಾಡೆಮಿ ಧಾರವಾಡ |
| 8 | ಕುಮಾರಿ ರಷ್ಮಿ ದೇಸಾಯಿ | ಉತ್ತರ ಕನ್ನಡ | ಚಾಮರಾಜನಗರ | ಸಾಮಾಜಿಕ ಅರಣ್ಯ ವಲಯ ಗುಂಡ್ಲುಪೇಟೆ |
| 9 | ಕುಮಾರಿ ಅಮೃತ ಟಿ. ಆರ್. | ದಾವಣಗೆರೆ | ಚಾಮರಾಜನಗರ | ಸಾಮಾಜಿಕ ಅರಣ್ಯ ವಲಯ ಚಾಮರಾಜನಗರ |
| 10 | ಶ್ರೀ ನಮನ್ ನಾರಾಯಣ ನಾಯಕ್ | ಕೊಡಗು | ಕೊಡಗು | ಸಾಮಾಜಿಕ ಅರಣ್ಯ ವಲಯ ಸೋಮವಾರಪೇಟೆ |
| 11 | ಶ್ರೀ ಪ್ರವೀಣ್ ರಾಮಪ್ಪ ಚಲವಾದಿ | ಹಾವೇರಿ | ಕರ್ನಾಟಕ ಮೃಗಾಲಯ ಪ್ರಾಧಿಕಾರ, ಮೈಸೂರು | ಕರ್ನಾಟಕ ಮೃಗಾಲಯ ಪ್ರಾಧಿಕಾರ ಬನ್ನೇರುಘಟ್ಟ |
| 12 | ಕುಮಾರಿ ಸುನಿತ ಮಾಲನಕೊಪ್ಪ | ಹಾವೇರಿ | ಧಾರವಾಡ | ಉಪ ಅರಣ್ಯ ಸಂರಕ್ಷಣಾಧಿಕಾರಿ ಕಛೇರಿ ಮೋಜಣಿ ಘಟಕ ಧಾರವಾಡ |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)

ದಿನಾಂಕ: 14 –01–2019

ಅನುಬಂಧ – 2

ತರಬೇತಿ ಕೇಂದ್ರ:Karnataka Forest Academy, Gungaragatti, Dharwad

| ಕ್ರ.ಸಂ. | ಹೆಸರು | ಸ್ವಂತ ಜಿಲ್ಲೆ | ವೃತ್ತ | ಸ್ಥಳ ನಿಯುಕ್ತಿಗೊಳಿಸಿರುವ ವಲಯ |
|---|---|---|---|---|
| 1 | ಕುಮಾರಿ ಚೈತ್ರ ಪ್ರಕಾಶ್ ಮೆಣಸಿನಕಾಯಿ | ಗದಗ | ಅರಣ್ಯ ಕೃಷಿಕರು ಧಾರವಾಡ | ಸಂಶೋಧನೆ ವಲಯ ಬೆಳಗಾವಿ |
| 2 | ಶ್ರೀ ರಾಕೇಶ್ ಲಗಮಣ್ಣ ಅರ್ಜುನವಾಡ | ಬೆಳಗಾವಿ | ಬೆಳಗಾವಿ | ಉಪ ಅರಣ್ಯ ಸಂರಕ್ಷಣಾಧಿಕಾರಿ ಕಛೇರಿ ಮೋಜಣಿ ಘಟಕ ಬೆಳಗಾವಿ |
| 3 | ಶ್ರೀ ಶಿವಾನಂದ ಮುತ್ತಪ್ಪ ಕೊಟ್ಯಾಳ | ಧಾರವಾಡ | ಕೆನರಾ | ಉಪ ಅರಣ್ಯ ಸಂರಕ್ಷಣಾಧಿಕಾರಿ ಕಛೇರಿ ಮೋಜಣಿ ಘಟಕ ಹೊನ್ನಾವರ |
| 4 | ಶ್ರೀ ಶಶಿಧರ ವಿ. | ಬೆಂಗಳೂರು ನಗರ | ಹಾಸನ | ಸಾಮಾಜಿಕ ಅರಣ್ಯ ವಲಯ ತುರುವೇಕೆರೆ |
| 5 | ಶ್ರೀ ಜಿತೇಂದ್ರ ಎ. ಎನ್. | ಬೆಂಗಳೂರು ನಗರ | ಹಾಸನ | ಸಾಮಾಜಿಕ ಅರಣ್ಯ ವಲಯ ಮಧುಗಿರಿ |
| 6 | ಶ್ರೀ ತೇಜ್ ವೈ. ಪಿ. | ಬೆಂಗಳೂರು ನಗರ | ಬೆಂಗಳೂರು | ಸಾಮಾಜಿಕ ಅರಣ್ಯ ವಲಯ ಮುಳಬಾಗಿಲು |
| 7 | ಶ್ರೀ ಪವನಕುಮಾರ್ ಎನ್. | ಶಿವಮೊಗ್ಗ | ಶಿವಮೊಗ್ಗ | ಸಾಮಾಜಿಕ ಅರಣ್ಯ ವಲಯ ಶಿಕಾರಿಪುರ |
| 8 | ಶ್ರೀ ಶಣ್ಮುಖ ಡಿ. ಎಂ. | ದಾವಣಗೆರೆ | ಕರ್ನಾಟಕ ರಾಜ್ಯ ಅರಣ್ಯ ಅಕಾಡೆಮಿ, ಧಾರವಾಡ | ಅರಣ್ಯ ತರಬೇತಿ ಕೇಂದ್ರ ಚಕ್ರ, ಶಿವಮೊಗ್ಗ |
| 9 | ಶ್ರೀ ಪುರುಷೋತ್ತಮ ರಾವ್ ಜಿ. ಕೆ. | ಬಳ್ಳಾರಿ | ಶಿವಮೊಗ್ಗ | ಸಾಮಾಜಿಕ ಅರಣ್ಯ ವಲಯ ಶಿವಮೊಗ್ಗ |
| 10 | ಶ್ರೀ ಚೇತನ ಹೆಚ್. ಪಿ. | ಕೊಡಗು | ಮಂಗಳೂರು | ಸಾಮಾಜಿಕ ಅರಣ್ಯ ವಲಯ ಬೆಳ್ತಂಗಡಿ |
| 11 | ಶ್ರೀ ನಿಶ್ಚಿತ್ ಎಂ. ಎನ್. | ಚಿಕ್ಕಮಗಳೂರು | ಚಾಮರಾಜನಗರ | ವನ್ಯಜೀವಿ ವಲಯ ಗೋಪಿನಾಥಂ |
| 12 | ಕುಮಾರಿ ಸುಮ ಎಸ್. ಹಳೆಹೊಳಿ | ಬಾಗಲಕೋಟೆ | ಬೆಳಗಾವಿ | ಸಾಮಾಜಿಕ ಅರಣ್ಯ ವಲಯ ಇಂಡಿ |
| 13 | ಕುಮಾರಿ ಚೇತನಾ ಜಿ. ಮುದಿಗೌಡ್ರ | ಧಾರವಾಡ | ಬೆಳಗಾವಿ | ಸಾಮಾಜಿಕ ಅರಣ್ಯ ವಲಯ ಕುಂದಗೋಳ |
| 14 | ಕುಮಾರಿ ಸ್ಮಿತ ಎಂ. ಡಿ. | ಚಿಕ್ಕಮಗಳೂರು | ಚಿಕ್ಕಮಗಳೂರು | ಸಾಮಾಜಿಕ ಅರಣ್ಯ ವಲಯ ಕೊಪ್ಪ |
| 15 | ಶ್ರೀ ಶ್ರೀನಿವಾಸ ಆರ್. | ಕೋಲಾರ | ಮೈಸೂರು | ಸಾಮಾಜಿಕ ಅರಣ್ಯ ವಲಯ ಕೆ. ಆರ್. ಪೇಟೆ |
| 16 | ಶ್ರೀ ಸುರೇಶ್ ಅಲಮೆಲ್ | ವಿಜಯಪುರ | ಬೆಳಗಾವಿ | ಸಾಮಾಜಿಕ ಅರಣ್ಯ ವಲಯ ಸಿಂಧಗಿ |

| ಕ್ರ.ಸಂ. | ಹೆಸರು | ಸ್ವಂತ ಜಿಲ್ಲೆ | ವೃತ್ತ | ಸ್ಥಳ ನಿಯುಕ್ತಿಗೊಳಿಸಿರುವ ವಲಯ |
|---|---|---|---|---|
| 17 | ಶ್ರೀ ಸಂದೇಶ್ ಕುಮಾರ್ | ಉಡುಪಿ | ಕೆನರಾ | ಉಪ ಅರಣ್ಯ ಸಂರಕ್ಷಣಾಧಿಕಾರಿ ಕಛೇರಿ ಮೋಜಣಿ ಘಟಕ ಕಾರವಾರ |
| 18 | ಶ್ರೀ ಆನಂದ ಅಶೋಕ್ ಹೆಗಡೆ | ಬೆಳಗಾವಿ | ಅರಣ್ಯ ಕೃಷಿಕರು ಧಾರವಾಡ | ಸಂಶೋಧನೆ ಶಿವಮೊಗ್ಗ |
| 19 | ಶ್ರೀ ಚನ್ನಬಸವರಾಜ ಕಟ್ಟಿಮನಿ | ರಾಯಚೂರು | ಧಾರವಾಡ | ಸಾಮಾಜಿಕ ಅರಣ್ಯ ವಲಯ ಶಿರಹಟ್ಟಿ |
| 20 | ಕುಮಾರಿ ಅಕ್ಷತ ಹೆಚ್. | ಬೆಂಗಳೂರು ನಗರ | ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಬೆಂಗಳೂರು | ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಬೆಂಗಳೂರು |
| 21 | ಕುಮಾರಿ ಜ್ಯೋತಿ ಎಸ್. ಸಿ. | ಬೆಂಗಳೂರು ನಗರ | ಮೈಸೂರು | ಸಾಮಾಜಿಕ ಅರಣ್ಯ ವಲಯ ಮಂಡ್ಯ |
| 22 | ಕುಮಾರಿ ಗಾಯತ್ರಿ ಯಶವಂತ ನಾಯಕ್ | ಉತ್ತರ ಕನ್ನಡ | ಧಾರವಾಡ | ಸಾಮಾಜಿಕ ಅರಣ್ಯ ವಲಯ ಸವಣೂರು |
| 23 | ಕುಮಾರಿ ದಾನವ್ವ ಗಿರಮಲ್ಲ ಗುಂಜಿಗಾವಿ | ಬೆಳಗಾವಿ | ಕೆನರಾ | ಸಾಮಾಜಿಕ ಅರಣ್ಯ ವಲಯ ಯಲ್ಲಾಪುರ |
| 24 | ಕುಮಾರಿ ಶ್ವೇತ ಎಸ್. | ದಾವಣಗೆರೆ | ಬಳ್ಳಾರಿ | ಸಾಮಾಜಿಕ ಅರಣ್ಯ ವಲಯ ಜಗಳೂರು |
| 25 | ಕುಮಾರಿ ಪಲ್ಲವಿ ಜೆ. ಎಂ. | ಹಾಸನ | ಹಾಸನ | ಸಾಮಾಜಿಕ ಅರಣ್ಯ ವಲಯ ಅರಕಲಗೂಡು |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)

ದಿನಾಂಕ: 14-01-2019

ಅನುಬಂಧ – 3

**ತರಬೇತಿ ಕೇಂದ್ರ:** Uttarakhand Forestry Training Academy, Haldwani (Uttarakhand)

| ಕ್ರ.ಸಂ. | ವಿಷಯ | ಅವಧಿ |
|---|---|---|
| 1 | ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಇವರ ಸಮ್ಮುಖ ಹಾಜರಾಗುವುದು | ದಿನಾಂಕ: 16.01.2019 |
| 2 | ಸಂಬಂಧಿಸಿದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಇವರ ಸಮ್ಮುಖ ಹಾಜರಾಗುವುದು | ದಿನಾಂಕ: 17.01.2019 |
| 3 | ಪ್ರಾದೇಶಿಕ ವಲಯದಲ್ಲಿ ಕರ್ತವ್ಯ ನಿರ್ವಹಣೆ | ದಿನಾಂಕ: 18.01.2019 ರಿಂದ ದಿನಾಂಕ: 16.02.2019 |
| 4 | ವನ್ಯಜೀವಿ ವಲಯದಲ್ಲಿ ಕರ್ತವ್ಯ ನಿರ್ವಹಣೆ | ದಿನಾಂಕ: 18.02.2019 ರಿಂದ ದಿನಾಂಕ: 16.03.2019 |
| 5 | ಸಾಮಾಜಿಕ ಅರಣ್ಯ ವಲಯದಲ್ಲಿ ಕರ್ತವ್ಯ ನಿರ್ವಹಣೆ | ದಿನಾಂಕ: 18.03.2019 ರಿಂದ ದಿನಾಂಕ: 30.03.2019 |
| 6 | ಕಾರ್ಯ ಯೋಜನೆ ಘಟಕಗಳಲ್ಲಿ ಕರ್ತವ್ಯ ನಿರ್ವಹಣೆ | ದಿನಾಂಕ: 01.04.2019 ರಿಂದ ದಿನಾಂಕ: 15.04.2019 |
| 7 | ಸಂಶೋಧನಾ ವೃತ್ತ ಘಟಕಗಳಲ್ಲಿ ಕರ್ತವ್ಯ ನಿರ್ವಹಣೆ | ದಿನಾಂಕ: 16.04.2019 ರಿಂದ ದಿನಾಂಕ: 30.04.2019 |
| 8 | ಸರ್ಕಾರಿ ನಾಟಾ ಸಂಗ್ರಹಾಲಯದಲ್ಲಿ ಕರ್ತವ್ಯ ನಿರ್ವಹಣೆ | ದಿನಾಂಕ: 02.05.2019 ರಿಂದ ದಿನಾಂಕ: 15.05.2019 |
| 9 | ವೃತ್ತ ಮಟ್ಟದ ಮಾಹಿತಿ ತಂತ್ರಜ್ಞಾನ ಕೋಶದಲ್ಲಿ ಕರ್ತವ್ಯ ನಿರ್ವಹಣೆ | ದಿನಾಂಕ: 16.05.2019 ರಿಂದ ದಿನಾಂಕ: 25.05.2019 |
| 10 | ವಿಭಾಗ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಣೆ | ದಿನಾಂಕ: 27.05.2019 ರಿಂದ ದಿನಾಂಕ: 01.06.2019 |
| 11 | ವೃತ ಕಛೇರಿಯಲ್ಲಿ ಕರ್ತವ್ಯ ನಿರ್ವಹಣೆ | ದಿನಾಂಕ: 03.06.2019 ರಿಂದ ದಿನಾಂಕ: 12.06.2019 |
| 12 | Zoo / Safari / Re-habitation Centre ಗಳಲ್ಲಿ ಕರ್ತವ್ಯ ನಿರ್ವಹಣೆ | ದಿನಾಂಕ: 13.06.2019 ರಿಂದ ದಿನಾಂಕ: 19.06.2019 |
| 13 | ಮುಂಜಾಗೃತಾ ಕ್ರಮಗಳಿಗೆ ಎಚ್ಚರಿಕೆ ವಹಿಸುವ ಸಲುವಾಗಿ ಆಯಾ ಜಿಲ್ಲೆಯಲ್ಲಿ ಇರುವ ಅಗ್ನಿ ಶಾಮಕ ಘಟಕಗಳೊಂದಿಗೆ ಪ್ರಥಮ ಚಿಕಿತ್ಸೆಯ ಕುರಿತು ಮಾಹಿತಿ ಪಡೆಯುವುದು | ದಿನಾಂಕ: 20.06.2019 ರಿಂದ ದಿನಾಂಕ: 27.06.2019 |
| 14 | ಜಿಲ್ಲಾ ಮಟ್ಟದ ಪಶುವೈದ್ಯ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆಯ ಕುರಿತು ಮಾಹಿತಿ ಪಡೆಯುವುದು | ದಿನಾಂಕ: 28.06.2019 ರಿಂದ ದಿನಾಂಕ: 05.07.2019 |

| ಕ್ರ.ಸಂ. | ವಿಷಯ | ಅವಧಿ |
|---|---|---|
| 15 | ತಾಲ್ಲೂಕು ಮಟ್ಟದ ತಹಶೀಲ್ದಾರ್ ಕಛೇರಿಯಲ್ಲಿ ಭೂ ದಾಖಲೆಗಳ ಮಾಹಿತಿ ಪಡೆಯುವುದು | ದಿನಾಂಕ: 06.07.2019 ರಿಂದ ದಿನಾಂಕ: 15.07.2019 |
| 16 | ಮಾಹಿತಿ, ಸಂವಹನ ಮತ್ತು ತಂತ್ರಜ್ಞಾನ ಕೇಂದ್ರ, ಅರಣ್ಯ ಭವನ ಕಛೇರಿ | ದಿನಾಂಕ: 16.07.2019 ರಿಂದ ದಿನಾಂಕ: 23.07.2019 |
| 17 | ಆಡಳಿತ ತರಬೇತಿ ಸಂಸ್ಥೆ, ಮೈಸೂರು / ಅರಣ್ಯ ತರಬೇತಿ ಸಂಸ್ಥೆ, ಕಾಡುಗೋಡಿ ಇಲ್ಲಿ ಎಲ್ಲಾ ಪರೀಕ್ಷಾರ್ಥ ಅಭ್ಯರ್ಥಿಗಳಿಗೆ ಕರ್ನಾಟಕ ಸಾರ್ವಜನಿಕ ಆಡಳಿತ ಸಂಬಂಧಿಸಿದ ವಿಷಯಗಳ ಬಗ್ಗೆ ಬುನಾದಿ ತರಬೇತಿ ನೀಡಲಾಗುವುದು. ಈ ಬಗ್ಗೆ ಸೂಕ್ತ ವ್ಯವಸ್ಥೆಯನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮಾನವ ಸಂಪನ್ಮೂಲ ಅಭಿವೃದ್ಧಿ, ಧಾರವಾಡ ಇವರು ನಿರ್ವಹಿಸುವುದು. | ದಿನಾಂಕ: 24.07.2019 ರಿಂದ ದಿನಾಂಕ: 31.07.2019 |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)

ದಿನಾಂಕ: 08-01-2019

ಅನುಬಂಧ – 4

ತರಬೇತಿ ಕೇಂದ್ರ: Karnataka Forest Academy, Gungaragatti, Dharwad

| ಕ್ರ.ಸಂ. | ವಿಷಯ | ಅವಧಿ |
|---|---|---|
| 1 | ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಇವರ ಸಮ್ಮುಖ ಹಾಜರಾಗುವುದು | ದಿನಾಂಕ: 25.01.2019 |
| 2 | ಸಂಬಂಧಿಸಿದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಇವರ ಸಮ್ಮುಖ ಹಾಜರಾಗುವುದು | ದಿನಾಂಕ: 26.01.2019 |
| 3 | ಪ್ರಾದೇಶಿಕ ವಲಯದಲ್ಲಿ ಕರ್ತವ್ಯ ನಿರ್ವಹಣೆ | ದಿನಾಂಕ: 28.01.2019 ರಿಂದ ದಿನಾಂಕ: 23.02.2019 |
| 4 | ವನ್ಯಜೀವಿ ವಲಯದಲ್ಲಿ ಕರ್ತವ್ಯ ನಿರ್ವಹಣೆ | ದಿನಾಂಕ: 25.02.2019 ರಿಂದ ದಿನಾಂಕ: 23.03.2019 |
| 5 | ಸಾಮಾಜಿಕ ಅರಣ್ಯ ವಲಯದಲ್ಲಿ ಕರ್ತವ್ಯ ನಿರ್ವಹಣೆ | ದಿನಾಂಕ: 25.03.2019 ರಿಂದ ದಿನಾಂಕ: 10.03.2019 |
| 6 | ಕಾರ್ಯ ಯೋಜನೆ ಘಟಕಗಳಲ್ಲಿ ಕರ್ತವ್ಯ ನಿರ್ವಹಣೆ | ದಿನಾಂಕ: 11.04.2019 ರಿಂದ ದಿನಾಂಕ: 25.04.2019 |
| 7 | ಸಂಶೋಧನಾ ವೃತ್ತ ಘಟಕಗಳಲ್ಲಿ ಕರ್ತವ್ಯ ನಿರ್ವಹಣೆ | ದಿನಾಂಕ: 26.04.2019 ರಿಂದ ದಿನಾಂಕ: 10.05.2019 |
| 8 | ಸರ್ಕಾರಿ ನಾಟಾ ಸಂಗ್ರಹಾಲಯದಲ್ಲಿ ಕರ್ತವ್ಯ ನಿರ್ವಹಣೆ | ದಿನಾಂಕ: 13.05.2019 ರಿಂದ ದಿನಾಂಕ: 20.05.2019 |
| 9 | ವೃತ್ತ ಮಟ್ಟದ ಮಾಹಿತಿ ತಂತ್ರಜ್ಞಾನ ಕೋಶದಲ್ಲಿ ಕರ್ತವ್ಯ ನಿರ್ವಹಣೆ | ದಿನಾಂಕ: 21.05.2019 ರಿಂದ ದಿನಾಂಕ: 30.05.2019 |
| 10 | ವಿಭಾಗ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಣೆ | ದಿನಾಂಕ: 31.05.2019 ರಿಂದ ದಿನಾಂಕ: 07.06.2019 |
| 11 | ವೃತ ಕಛೇರಿಯಲ್ಲಿ ಕರ್ತವ್ಯ ನಿರ್ವಹಣೆ | ದಿನಾಂಕ: 10.06.2019 ರಿಂದ ದಿನಾಂಕ: 17.06.2019 |
| 12 | Zoo / Safari / Re-habitation Centre ಗಳಲ್ಲಿ ಕರ್ತವ್ಯ ನಿರ್ವಹಣೆ | ದಿನಾಂಕ: 18.06.2019 ರಿಂದ ದಿನಾಂಕ: 24.06.2019 |
| 13 | ಮುಂಜಾಗ್ರತಾ ಕ್ರಮಗಳಿಗೆ ಎಚ್ಚರಿಕೆ ವಹಿಸುವ ಸಲುವಾಗಿ ಆಯಾ ಜಿಲ್ಲೆಯಲ್ಲಿ ಇರುವ ಅಗ್ನಿ ಶಾಮಕ ಘಟಕಗಳೊಂದಿಗೆ ಪ್ರಥಮ ಚಿಕಿತ್ಸೆಯ ಕುರಿತು ಮಾಹಿತಿ ಪಡೆಯುವುದು | ದಿನಾಂಕ: 25.06.2019 ರಿಂದ ದಿನಾಂಕ: 02.07.2019 |
| 14 | ಜಿಲ್ಲಾ ಮಟ್ಟದ ಪಶುವೈದ್ಯ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆಯ ಕುರಿತು ಮಾಹಿತಿ ಪಡೆಯುವುದು | ದಿನಾಂಕ: 03.07.2019 ರಿಂದ ದಿನಾಂಕ: 12.07.2019 |

| ಕ್ರಸಂ. | ವಿಷಯ | ಅವಧಿ |
|---|---|---|
| 15 | ತಾಲ್ಲೂಕು ಮಟ್ಟದ ತಹಶೀಲ್ದಾರ್ ಕಛೇರಿಯಲ್ಲಿ ಭೂ ದಾಖಲೆಗಳ ಮಾಹಿತಿ ಪಡೆಯುವುದು | ದಿನಾಂಕ: 15.07.2019 ರಿಂದ ದಿನಾಂಕ: 24.07.2019 |
| 16 | ಮಾಹಿತಿ, ಸಂವಹನ ಮತ್ತು ತಂತ್ರಜ್ಞಾನ ಕೇಂದ್ರ, ಅರಣ್ಯ ಭವನ ಕಛೇರಿ | ದಿನಾಂಕ: 25.07.2019 ರಿಂದ ದಿನಾಂಕ: 31.07.2019 |
| 17 | ಆಡಳಿತ ತರಬೇತಿ ಸಂಸ್ಥೆ, ಮೈಸೂರು / ಅರಣ್ಯ ತರಬೇತಿ ಸಂಸ್ಥೆ, ಕಾಡುಗೋಡಿ ಇಲ್ಲಿ ಎಲ್ಲಾ ಪರೀಕ್ಷಾರ್ಥ ಅಭ್ಯರ್ಥಿಗಳಿಗೆ ಕರ್ನಾಟಕ ಸಾರ್ವಜನಿಕ ಆಡಳಿತ ಸಂಬಂಧಿಸಿದ ವಿಷಯಗಳ ಬಗ್ಗೆ ಬುನಾದಿ ತರಬೇತಿ ನೀಡಲಾಗುವುದು. ಈ ಬಗ್ಗೆ ಸೂಕ್ತ ವ್ಯವಸ್ಥೆಯನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮಾನವ ಸಂಪನ್ಮೂಲ ಅಭಿವೃದ್ಧಿ, ಧಾರವಾಡ ಇವರು ನಿರ್ವಹಿಸುವುದು. | ದಿನಾಂಕ: 01.08.2019 ರಿಂದ ದಿನಾಂಕ: 14.08.2019 |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)

ದಿನಾಂಕ:08 –01–2019